**ಸಾಕ್ಷಿಯನ್ನು ದಿಃ 10.08.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀಸವಾಲುಃ 1 ರಿಂದ 4ನೇ ಪ್ರತಿವಾದಿ ಪರ ಶ್ರೀ ಸಿ ಎಸ್ ಡಿ ವಕೀಲರಿಂದ**

ನನ್ನ ತಂದೆಯವರು 2015 ರಲ್ಲಿ ಮೃತರಾಗಿರುತ್ತಾರೆ. ನನ್ನ ತಂದೆಗೆ ಒಟ್ಟು 6 ಜನ ಮಕ್ಕಳು,ಅದರಲ್ಲಿ ಇಬ್ಬರು ಗಂಡು ಮಕ್ಕಳು, 4 ಜನ ಹೆಣ್ಣು ಮಕ್ಕಳು. ನಮ್ಮ ಕುಟುಂಬಕ್ಕೆ ಸೇರಿದ ಕೋರೆನಹಳ್ಳಿ ಮತ್ತು ಚಲ್ಲಹಳ್ಳಿಯಲ್ಲಿ 14-15 ಕಡೆ ಆಸ್ತಿ ಇದೆ. ಒಟ್ಟು ವಿಸ್ತೀರ್ಣ 12 ಎಕರೆ ಇರುತ್ತದೆ. ನನ್ನ ಅಣ್ಣನಾದ ಮಹೇಂದ್ರನಿಗೆ 4 ಎಕರೆ ನನ್ನ ಹೆಸರಿನಲ್ಲಿ 3 ½ ಎಕರೆ ಜಾಗ ಇರುತ್ತದೆ. ನನ್ನ ತಂದೆಯವರು ಅವರ ಜೀವಿಂತ ಅವಧಿಯಲ್ಲಿ ಅಂದರೆ 2012 ರಲ್ಲಿ ನನಗೆ ಮತ್ತು ಅಣ್ಣನಿಗೆ ವಿಭಾಗ ಮಾಡಿಕೊಟ್ಟಿರುತ್ತಾರೆ. 2012ರ ನಂತರ ನನ್ನ ಹಾಗೂ ಅಣ್ಣನವರು ಪ್ರತ್ಯೇಕವಾಗಿ ವ್ಯವಹಾರ ಮಾಡಿಕೊಂಡು ಬೇರೆಬೇರೆಯಾಗಿ ವಾಸವಿರುತ್ತೇವೆ.

ನನ್ನ ಅಕ್ಕ-ತಂಗಿಯರು ವಿವಾಹವಾಗಿ ಅವರವರ ಗಂಡನ ಮನೆಯಲ್ಲಿ ವಾಸವಾಗಿದ್ದು, ಕುಟುಂಬದ ಆಸ್ತಿಯಲ್ಲಿ ಯಾವುದೇ ಪಾಲನ್ನು ಕೇಳಿರುವುದಿಲ್ಲ ಹಾಗೂ ನಾವು ಯಾವುದೇ ಪಾಲನ್ನು ನೀಡಿರುವುದಿಲ್ಲ ಎಂದರೆ ಸರಿ. ಅಕ್ಕ-ತಂಗಿಯವರು ಭಾಗ ಕೇಳಿರುವುದಿಲ್ಲ, ಭಾಗ ಕೇಳಲು ಬಂದರೆ ಅವರ ಪಾಲು ನೀಡಲು ನಾವು ಸಿದ್ದರೇದ್ದೇವೆ ಎಂದು ನುಡಿಯುತ್ತಾರೆ. ನನ್ನ ತಂದೆಯವರು ಬಾಯಿ ಮಾತಿನ ಮೂಲಕ ನನಗೆ ಹಾಗೂ ನನ್ನ ಅಣ್ಣನಿಗೆ ಆಸ್ತಿಯನ್ನು ಪಾಲು ಮಾಡಿಕೊಟ್ಟಿರುತ್ತಾರೆ. ನನ್ನ ತಂದೆಗೆ ಸೇರಿದ 1 ಎಕರೆ 19 ½ ಗುಂಟೆ ಜಾಗವನ್ನು ಪ್ರತಿವಾದಿಯವರು ಅವರ ಹೆಸರಿಗೆ ಮಾಡಿಕೊಂಡಿರುವುದರಿಂದ ಈ ದಾವೆಯನ್ನು ಸಲ್ಲಿಸಲಾಗಿದೆ. ಸದರಿ ಆಸ್ತಿಯನ್ನು ಪ್ರತಿವಾದಿಯವರು 2011-12 ರಲ್ಲಿ ತಮ್ಮ ಹೆಸರಿಗೆ ಮಾಡಿಕೊಂಡಿರುತ್ತಾರೆ. ವಾರಸುದಾರರ ಯಾರು ಇಲ್ಲ ಎಂಬ ಆಧಾರದ ಮೇಲೆ ಆಸ್ತಿಯನ್ನು ಪ್ರತಿವಾದಿಯವರು ತಮ್ಮ ಹೆಸರಿಗೆ ಮಾಡಿಕೊಂಡಿರುತ್ತಾರೆ.

ನನ್ನ ತಂದೆಯ ಹೆಸರು ನಿಂಗೇಗೌಡನ ಮಗ ಕೆಂಪೇಗೌಡ ಎಂದರೆ ಸರಿ. ಬಲರಾಮೇಗೌಡರವರ ತಂದೆ ಕೆಂಪೇಗೌಡರವರು ನಂಜೇಗೌಡ ರವರ ಮಗ ಎಂದರೆ ಸರಿ. 1 ರಿಂದ 4ನೇ ಪ್ರತಿವಾದಿಯವರು ಅವರ ತಕರಾರಿನಲ್ಲಿ ನನ್ನ ತಂದೆಯವರು ಅವರ ತಂದೆಯವರಿಗೆ ಕ್ರಯಪತ್ರ ಮಾಡಿಕೊಟ್ಟಿರುವುದಾಗಿ ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಕ್ರಯಪತ್ರವನ್ನು ನಾನು ಪರಿಶೀಲನೆ ಮಾಡಿ ನೋಡಿಲ್ಲ. ನನ್ನ ತಂದೆಯವರು ತನ್ನ ಕುಟುಂಬದ ವ್ಯವಹಾರಗೋಸ್ಕರ ದಿಃ 28.03.1975 ರಲ್ಲಿ 29 ಗುಂಟೆ ಸ್ವತ್ತನ್ನು ಮತ್ತು ದಿಃ 27.03.2007 ರಲ್ಲಿ 30 ಗುಂಟೆ ಸ್ವತ್ತನ್ನು ಕ್ರಯಪತ್ರದ ಮೂಲಕ ಕೆಂಪೇಗೌಡ ಬಿನ್ ನಂಜೇಗೌಡರವರಿಗೆ ಕ್ರಯ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಕ್ರಯಪತ್ರ ಮಾಡಿದ ನಂತರ

1 ರಿಂದ 4ನೇ ಪ್ರತಿವಾದಿಯವರ ತಂದೆಯಾದ ಕೆಂಪೇಗೌಡರವರು ಸ್ವಾಧೀನಾನುಭೋಗವನ್ನು ಹೊಂದಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಕೆಂಪೇಗೌಡ ಪೌತಿಯಾದ ನಂತರ 1 ರಿಂದ 4ನೇ ಪ್ರತಿವಾದಿಯರು ಹಕ್ಕುದಾರರಾಗಿ ಅನುಭೋಗಿಸಿಕೊಂಡು ಬರುತ್ತಿರುತ್ತಾರೆ ಎಂದರೆ ಸರಿಯಲ್ಲ. ಕೆಂಪೇಗೌಡರವರ ಕುಟುಂಬದಲ್ಲಿ ವಿಭಜನೆಯ ಪ್ರಕಾರ ದಾವಾ ಸ್ವತ್ತು 4ನೇ ಪ್ರತಿವಾದಿಯಾದ ರಾಜೇಗೌಡರವರ ಹಿಸ್ಸೆಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ಆನಂತರ 4ನೇ ಪ್ರತಿವಾದಿಯವರು ದಾವಾ ಸ್ವತ್ತನ್ನು ಆತನ ಹೆಂಡತಿಯಾದ ಲಕ್ಷ್ಮೀಯವರಿಗೆ ನೊಂದಾಯಿತ ದಾನಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ದಾನಪತ್ರದ ಪ್ರಕಾರ ಖಾತೆ ಬದಲಾವಣೆ ಮಾಡಿಸಿಕೊಂಡು ಹಕ್ಕು ಸ್ವಾಧೀನ ಹೊಂದಿಕೊಂಡು ಬಂದಿರುತ್ತಾರೆ ಎಂದರೆ ಸರಿಯಲ್ಲ.

4ನೇ ಪ್ರತಿವಾದಿಯ ಹೆಂಡತಿಯಾದ ಲಕ್ಷ್ಮೀಯವರ ದಾನಪತ್ರದ ಪ್ರಕಾರ ಖಾತೆ ಬದಲಾವಣೆಯಾಗಬೇಕೆಂದು ತಾಲ್ಲೂಕು ಕಛೇರಿಗೆ ಅರ್ಜಿಯನ್ನು ಸಲ್ಲಿಸಿದ್ದರು ಎಂದರೆ ಸರಿ. ಸದರಿ ಅರ್ಜಿಗೆ ನಾವು ತಕರಾರು ಸಲ್ಲಿಸಿರುತ್ತೇವೆ ಎಂದರೆ ಸರಿ. ಸದರಿ ತಕರಾರನ್ನು ತಿರಸ್ಕರಿಸಿ ತಹಶೀಲ್ದಾರವರು 4ನೇ ಪ್ರತಿವಾದಿಯ ಹೆಂಡತಿ ಹೆಸರಿಗೆ ಖಾತೆ ಬದಲಾವಣೆ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ. ದಾವಾ ಸ್ವತ್ತು ಮೂಲತಃ ಸರ್ವೆ ನಂಬರ್ 42/3 ಆಗಿದ್ದು, ಪೋಡಿಯಾದ ನಂತರ ಸರ್ವೆ ನಂಬರ್ 42/7 ಆಯಿತು ಎಂದರೆ ಸರಿ.

ದಾವಾ ಸ್ವತ್ತಿನ ಮೇಲೆ ನನಗೆ ಯಾವುದೇ ರೀತಿ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೆ ಸಂಬಂಧಪಟ್ಟ ಎಲ್ಲಾ ದಾಖಲೆಗಳ ಬಗ್ಗೆ ಹಾಗೂ ಕ್ರಯ ವ್ಯವಹಾರಗಳ ಬಗ್ಗೆ ನನಗೆ ಗೊತ್ತಿದ್ದರೂ ಸಹ ಅದನ್ನು ಮರೆಮಾಚಿ ದಾವಾ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ-** ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

**Sd/-**

**2ನೇ ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಚನ್ನರಾಯಪಟ್ಟಣ.**